**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**O.S. 32/2021** **PW: 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 06.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಎಚ್ ಕೆ ವಕೀಲರಿಂದಃ**

**2.** ನಿಪಿ 6 ಕಾಲಂ ನಂ. 9 ರಲ್ಲಿ ಮೇಲೆ ಮಕ್ತುಮ್ ಸಾವಿತ್ರಮ್ಮ ಕೋಂ ಗೋವಿಂದಪ್ಪ ಕೆಳಗಡೆ ಭಾರತೀಯ ರಾಷ್ಟ್ರಿಯ ಹೆದ್ದಾರಿ ಪ್ರಾಧಿಕಾರ ರಾ ಹೆ ನಂ 63 ಅಂತ ಇದೆ ಎಂದರೆ ಸರಿ. ನಿಪಿ 11 ರಲ್ಲಿ ಪುಟ ನಂ. 2 ರಲ್ಲಿ ಭಾರತೀಯ ರಾಷ್ಟ್ರಿಯ ಹೆದ್ದಾರಿ ಪ್ರಾಧಿಕಾರ ರಾ ಹೆ ನಂ 63 ಅಂತ ಇದೆ ಎಂದರೆ ಸರಿ.

3. 1991 ರಿಂದ ದಾವಾ ಸಲ್ಲಿಸುವವರೆಗೂ ನಮ್ಮ ಮನೆತನದ ಎಲ್ಲಾ ವ್ಯವಹಾರಗಳನ್ನು ನನ್ನ ಅಣ್ಣ ರಾಮನಗೌಡ ಮನೆತನದ ವ್ಯವಹಾರಗಳನ್ನು ಮಾಡಿರುತ್ತಾರೆಂದರೆ ಸರಿ. 1991 ರಿಂದ ನಾನು ದಾವೆ ಸಲ್ಲಿಸುವವರೆಗೂ ಆ ಮನತೆನದ ವ್ಯವಹಾರಗಳನ್ನು ನಾನೇ ಮಾಡಿರುತ್ತೇನೆ. ಆ ಮನೆತನದಲ್ಲಿ ಏನೇನು ವ್ಯವಹಾರ ಆಗಿದೆ ಎಂದು ಸಂಪೂರ್ಣ ಗೊತ್ತಿದೆ ಎಂದರೆ ಸರಿಯಲ್ಲ. ಆ ಘರಾಣೆಯ ಮನೆತನಕ್ಕೆ ನನ್ನ ಗುತ್ತಿಗೆ ಕೆಲಸ ಮಾಡುತ್ತಿದ್ದ ಹಣವನ್ನು ಆ ಮನೆತನಕ್ಕೆ ಕೊಟ್ಟಿರುತ್ತೇನೆ. ಈ ಬಗ್ಗೆ ದಾವೆಯಲ್ಲಿ ಬರೆಸಿಲ್ಲ. ನಾನು ಯಾವುದೇ ಹಣ ಕೊಟ್ಟಿಲ್ಲ ಆ ಕಾರಣದಿಂದ ಬರೆಸಿಲ್ಲ ಎಂದರೆ ಸರಿಯಲ್ಲ. ಪ್ರತಿ ವರ್ಷ ನನ್ನ ಗಂಡನಿಗೆ ಗುತ್ತಿಗೆ ಆದಾಯ ಎಷ್ಟು ಎಂದು ನನಗೆ ಗೊತ್ತಿಲ್ಲ. ನಾನು ಎಷ್ಟು ಹಣ ಕೊಟ್ಟಿರುತ್ತೇನೆ ಎಂದು ನಾನು ಸಾಕ್ಷಿ ಮಾಡಿಸುತ್ತೇನೆ. ಗಂಡನ ಮನೆಯ ಹಣವನ್ನು ತವರುಮನೆಗೆ ಎಷ್ಟು ಕೊಟ್ಟಿರುತ್ತೇನೆ ಎಂದು ವಾದ ಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ. ನಾನು ಒಬ್ಬಳೇ ಕೊಟ್ಟಿರುತ್ತೇನೆ ರಾಮನಗೌಡ ತೆಗೆದುಕೊಂಡಿರುತ್ತಾರೆ. ನಾನು ರಾಮನಗೌಡನಿಗೆ ಹಣ ಕೊಟ್ಟ ಬಗ್ಗೆ ನಾನು ಮತ್ತು ರಾಮನಗೌಡ ಸಾಕ್ಷಿದಾರರು ಸಹಿ ಮಾಡಿದ ದಾಖಲೆ ಇಲ್ಲ. ನಾನು ರಾಮನಗೌಡನಿಗೆ ಹಣಕಾಸಿನ ತೊಂದರೆ ಇರುವ ಸಲುವಾಗ ಹಣ ಕೊಟ್ಟಿರುತ್ತೇನೆ ಎಂದರೆ ಸರಿ. ಹಣಕಾಸಿನ ತೊಂದರೆ ಇರುವುದರಿಂದ ರಾಮನಗೌಡ ಕೆಲವೊಂದು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನಗೆ ಗೊತ್ತಿಲ್ಲದೇ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ.

4.	ನಿಪಿ 30 ರಿಂದ 34 ರಲ್ಲಿರುವ ಆಸ್ತಿಗಳನ್ನು ದಿಃ19- 11-2010 ರಂದು ರಾಮನಗೌಡ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲದೇ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮಾರಾಟ ಮಾಡಿದ್ದು ನನಗೆ ಗೊತ್ತಿಲ್ಲ. ನಿಪಿ 1 ರಿಂದ 4 ರಲ್ಲಿ ರಾಮನಗೌಡನ ಹೆಸರು 1991 ರಿಂದ ದಾವೆ ಸಲ್ಲಿಸುವವರೆಗೂ ರಾಮನಗೌಡನ ಹೆಸರು ಇದೆ ಎಂದರೆ ಸರಿ. ನಿಪಿ 1 2020 ನೇ ಇಸವಿಯ ಉತಾರ ಎಂದರೆ ಸರಿ. ಅದರಲ್ಲಿ ರಾಮನಗೌಡನ ಹೆಸರು ಇದೆ ಎಂದರೆ ಸರಿ. ಈಗ ಸಾಕ್ಷಿಗೆ ಒಂದು ಉತಾರವನ್ನು ತೋರಿಸಲಾಗಿ ಅದರಲ್ಲಿ ಹರ್ಷಗೌಡ ಇದೆ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನಿಡಿ 7 ಎಂದು ಗುರುತಿಸಲಾಯಿತು. ನಿಪಿ 1 ಮತ್ತು ನಿಡಿ 7 ಪಹಣಿ ಪತ್ರಿಕೆ ಸರ್ವೇ ನಂ 191 ನಲವಡಿ ಗ್ರಾಮ. ದಿಃ 28-01-2021 ರಂದು ಆದ ನಿಡಿ-7 ಮತ್ತು ನಿಪಿ-1 ರ ದಾಖಲೆ ಹಾಜರುಪಡಿಸಿರುತ್ತೇನೆ. ದಾವೆ ಸಲ್ಲಿಸುವ ಮುಂಚೆ ಹೆಸರು ಹಚ್ಚಿಕೊಂಡರು ಎಂದರೆ ಸರಿಯಲ್ಲ. ದಾವೆ ಸಲ್ಲಿಸಿದ ನಂತರ ಸಾಕ್ಷಿ ಮಾಡುವ ಮುಂಚೆ ದಾಖಲೆ ಹಾಜರುಪಡಿಸಿಲ್ಲ. ದಾವೆ ಸಲ್ಲಿಸುವ ಮೊದಲು ಹರ್ಷಗೌಡ ರಾಮನಗೌಡ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಅದೇ ರೀತಿ ನಿಪಿ 6 ಮತ್ತು 11 ರಲ್ಲಿ ಭಾರತೀಯ ರಾಷ್ಟ್ರಿಯ ಹೆದ್ದಾರಿ ಎಂದು ನಮೂದು ಇತ್ತು ಎಂದರೆ ಸರಿ. 1991 ರಿಂದ ರಾಮನಗೌಡ ದಾವಾ ಆಸ್ತಿಯಲ್ಲಿ ಅಡ್ಡಿ ಆತಂಕ ಇಲ್ಲದೇ ಮಾಲ್ಕೀ ಕಬ್ಜಾದಾರನಾಗಿ ಇದ್ದನು ಎಂದರೆ ಸರಿ.

5. ದಾವಾ ಆಸ್ತಿಯ ಚೆಕಬಂದಿ ಕಾಣಿಸಿರುವುದಿಲ್ಲ. ಚಕಬಂದಿ ಕಾಣಿಸಲು ನನಗೆ ತೊಂದರೆ ಇಲ್ಲ. ಆದರೆ ಚೆಕಬಂದಿಯ ಬಗ್ಗೆ ನನಗೆ ಮಾಹಿತಿ ಇದೆ. ನಿಪಿ 30 ರಿಂದ 34 ರಲ್ಲಿರುವ ಆಸ್ತಿಗಳನ್ನು 2010 ರಲ್ಲಿ ಮಾರಾಟ ಮಾಡಿದ್ದು ನ್ಯಾಯಾಲಯಕ್ಕೆ ಬರುವಾಗ ಗೊತ್ತಾಗಿದೆ. ಜನೇವರಿ 2021 ರಲ್ಲಿ ಕಾಗದ ಪತ್ರ ತೆಗೆಸಿದಾಗ ಗೊತ್ತಾಗಿರುತ್ತದೆ. 1991 ರಿಂದ ದಾವೆ ಸಲ್ಲಿಸುವವರೆಗೂ ಯಾವುದೇ ಕಾಗದ ಪತ್ರಗಳನ್ನು ತೆಗೆಸಿ ನೋಡಿಲ್ಲ. ನನಗೆ 4 ಜನ ಮಕ್ಕಳು. ಇಬ್ಬರೂ ಗಂಡು ಮತ್ತು ಇಬ್ಬರೂ ಹೆಣ್ಣು ಮಕ್ಕಳು. ನಿಂಗಮ್ಮನಿಗೆ ಮೂರು ಜನ ಹೆಣ್ಣು ಮಕ್ಕಳು. ನನ್ನ ದೊಡ್ಡಮಗಳು 1983 ರಲ್ಲಿ ಜನಿಸಿರುತ್ತಾಳೆ 2 ನೇ ಮಗಳು 1985 ರಲ್ಲಿ ಹುಟ್ಟಿರುತ್ತಾಳೆ. ಮತ್ತು 3 ನೇ ಮಗ 1990 ರಲ್ಲಿ ಜನಿಸಿರುತ್ತಾರೆ. 4 ನೇ ಮಗ 1991 ರಲ್ಲಿ ಜನಿಸಿರುತ್ತಾರೆ. ನನ್ನ ತಂಗಿ ನಿಂಗಮ್ಮನಿಗೆ 3 ಜನ ಹೆಣ್ಣು ಮಕ್ಕಳು. ಸದರಿ ಮೂರು ಜನ ಹೆಣ್ಣು ಮಕ್ಕಳು ನನ್ನ ಮೂರನೇ ಮಗನಿಗೆ ಕ್ಕಿಂತ ನಿಂಗಮ್ಮನ ಮೊದಲನೇ ಮಗಳು 7 ತಿಂಗಳು ದೊಡ್ಡವಳು. 1990 ರ ನಂತರ ಉಳಿದ ಮಕ್ಕಳು ಹುಟ್ಟಿರುತ್ತಾರೆ. ನನ್ನ 3 ನೇ ತಂಗಿ ಲಕ್ಷ್ಮವ್ವಳಿಗೆ ಒಂದು ಹೆಣ್ಣು ಮಗು ಮತ್ತು ಒಂದು ಗಂಡು ಮಗು ಇದೆ. ಮಕ್ಕಳು ಯಾವಾಗ ಜನಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಂಗಮ್ಮನ ಮಕ್ಕಳಿಗಿಂತ ಸಣ್ಣವರು. ನನ್ನ ಎರಡೂ ಹೆರಿಗೆ ತವರು ಮನೆಯಲ್ಲಿ ಆಗಿದೆ 2 ಹೆರಿಗೆ ಗಂಡನ ಮನೆಯಲ್ಲಿ ಆಗಿವೆ. ನನ್ನ ತಂಗಿಯರ ಹೆರಿಗೆ ಒಂದೊಂದು ತವರುಮನೆಯಲ್ಲಿ ಆಗಿವೆ.

ನನ್ನ ತಂದೆ ಮರಣದ ನಂತರ ನಮ್ಮ ಹೆಣ್ಣು ಮಕ್ಕಳ ಹೆರಿಗೆ ಬಾಣಂತನ ಆಸ್ಪತ್ರೆ ಖರ್ಚು ನನ್ನ ತಾಯಿ ಮತ್ತು ರಾಮನಗೌಡ ಇರುತ್ತಿದ್ದರೂ ಅವರೇ ನೋಡಿಕೊಂಡಿದ್ದಾರೆ ಎಂದರೆ ಅಳುತ್ತಾ ನಿಮಗೆ ಏನು ತಿಳಿಯುತ್ತೋ ಅದನ್ನು ಬರೆದುಕೊಳ್ಳಿ ಎಂದು ನುಡಿಯುತ್ತಾರೆ.

**ಮುಂದೂವರೆದ ಪಾಟಿ ಸವಾಲಿಗಾಗಿ ಸಮಯಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.